# ಮಕ್ಕಳಲ್ಲಿ ಡೊಂಕಾದ ಕಾಲುಗಳನ್ನು ಸರಿಪಡಿಸಬಹುದೇ ?

**ಮಕ್ಕಳು ಹುಟ್ಟಿದಾಗಿನಿಂದ ಹರೆಯದ ಪ್ರಾಯದವರೆಗೂ ವಿವಿಧ ಹಂತಗಳಲ್ಲಿ ಬೆಳೆಯುತ್ತಾರೆ.** ಅವರ ಬೆಳವಣಿಗೆಯಲ್ಲಿ ಅನುವಂಶಿಕ ಮತ್ತು ಪ್ರಾಕೃತಿಕ ಅಂಶಗಳು ಮಹತ್ವದ ಪಾತ್ರವಹಿಸುತ್ತವೆ. ಈ ಪ್ರಕ್ರಿಯೆಯಲ್ಲಿ ಯಾವುದಾದರೂ ವ್ಯತ್ಯಾಸ ಉಂಟಾದಲ್ಲಿ ಅದು ಪಾಲಕರು ಮತ್ತು ಪೋಷಕರಿಗೆ ತಲೆನೋವಾಗಿ ಪರಿಣಮಿಸುತ್ತದೆ. ನಮ್ಮಲ್ಲಿಗೆ ಕರೆತರಲಾಗುವ ಮಕ್ಕಳಲ್ಲಿ ಕಂಡುಬರುವ ಎರಡು ಸಮಸ್ಯೆಗಳೆಂದರೆ, ಒಂದು ಡೊಂಕು ಕಾಲುಗಳು ಮತ್ತು ಇನ್ನೊಂದು ಮೊಣಕಾಲುಗಳು ತಾಗುವುದು.

## ಕಾಲುಗಳು ಡೊಂಕಾಗುವುದು ಸಹಜವೆ?

ಎಲ್ಲ ಮಕ್ಕಳೂ ಸಮನಾಗಿ ಬಾಗಿರುವ ಕಾಲುಗಳಿಂದಲೇ ಜನಿಸುತ್ತವೆ, ಇದನ್ನು ಫಿಜಿಯಾಲಜಿಕಲ್ ಜೆನುವರುಂ ಎನ್ನಲಾಗುತ್ತದೆ. ಸುಮಾರು 1.5 ಇಂದ 2 ವರ್ಷದಲ್ಲಿ ಕಾಲುಗಳು ನೇರವಾಗುತ್ತವೆ. ಕೆಲವು ವರ್ಷಗಳು ಕಳೆದ ನಂತರ, ಕಾಲುಗಳು ಹೊರಬಾಚಿ ಬೆಳೆಯುವುದರಿಂದ ಮೊಣಕಾಲುಗಳು ಒಂದಕ್ಕೊಂದು ತಾಗುವ ಸಾಧ್ಯತೆ ಇರುತ್ತದೆ ಮತ್ತು ಇದನ್ನು ಫಿಜೋಯೋಲಾಜಿಕಲ್ ಜೆನುವಲ್ಗಂ ಎನ್ನಲಾಗುತ್ತದೆ.

ಇದೆಲ್ಲ ಸುಮಾರು 4 ವರ್ಷ ಮತ್ತು 7 ವರ್ಷದಿಂದ ಸಾಮಾನ್ಯ ಹರೆಯದ ಪ್ರಾಯ ಎನ್ನುವಷ್ಟರಲ್ಲಿ ಜರುಗುತ್ತದೆ.



## ನಿರಂತರ ವಿಕಾರತೆಗಳಿಗೆ ಕಾರಣವೇನು?

**ವಿಟಮಿನ್ ಡಿ ಕೊರತೆ, ಕ್ಯಾಲ್ಶಿಯಂ ಕೊರತೆ ಮತ್ತು ಇನ್ನಿತರ ಕಾರಣಗಳು ಕಿಡ್ನಿ ಮತ್ತು ಲಿವರ್ ನಿಷ್ಕ್ರಿಯತೆ ಅನುವಂಶಿತ, ಅಸ್ವಸ್ಥತೆಗಳು, ಸ್ಕೆಲೆಟಲ್ ಅಸ್ವಸ್ಥತೆಗಳು, ಇತರ ಬೆಳವಣಿಗೆಗೆ ಸಂಬಂಧಿತ ಕಾರಣಗಳಾಗಿರುತ್ತವೆ.**

## ಇಂತಹ ನಿರಂತರ ವಿಕಾರತೆಗಳಿಂದ ಉಂಟಾಗುವ ಸಮಸ್ಯೆಗಳು ಯಾವುವು?

ಕಾಸ್ಮೆಟಿಕ್ ಸಮಸ್ಯೆಗಳನ್ನು ಹೊರತು ಪಡಿಸಿದಂತೆ, ಈ ವಿಕಾರತೆಗಳಿಂದಾಗಿ ಮಂಡಿ ಕೀಲುಗಳ ಮೇಲೆ ವಿಪರೀತ ಭಾರ ಬೀಳುತ್ತದೆ ಮತ್ತು ಇದರಿಂದಾಗಿ ಅಕಾಲಿಕ ಯಾತನಾಮಯ ಮಂಡಿ ಸಂಧಿವಾತ ಸಮಸ್ಯೆ ಉಂಟಾಗುತ್ತದೆ.

## ಈ ಸಮಸ್ಯೆಗೆ ಲಭ್ಯವಿರುವ ಚಿಕಿತ್ಸಾ ಆಯ್ಕೆಗಳು ಯಾವುವು?

ಒಂದು ಬಾರಿ ವಿಕಾರತೆಯ ಹಿಂದಿನ ಕಾರಣವನ್ನು ಚಿಕಿತ್ಸೆಗೊಳಪಡಿಸಿದಾಗ ಅಥವಾ ನಿಯಂತ್ರಣಕ್ಕೆ ತೆಗೆದು ಕೊಂಡಾದ ಬಳಿಕ (ವಿಟಮಿನ್ ಡಿ ಪ್ರಮಾಣವನ್ನು ಸರಿಪಡಿಸುವುದು) ಇಂತಹ ವಿಕಾರತೆಗಳನ್ನು ಶಸ್ತ್ರಚಿಕಿತ್ಸಾ ವಿಧಾನಗಳ ಮೂಲಕ ಸರಿಪಡಿಸಬಹುದು. ಹಿಂದಿನ ದಿನಗಳಲ್ಲಿ, ಇಂತಹ ವಿಕಾರತೆಗಳನ್ನು ಸರಿಪಡಿ ಸಲು ಮೂಳೆಗಳನ್ನೇ ಕತ್ತರಿಸಲಾಗುತ್ತಿತ್ತು.



ಇದರಿಂದಾಗಿ ಧಿಡೀರ್ ಫಲಿತಾಂಶ ಲಭಿಸುತ್ತಿತ್ತು ನಿಜ, ಆದರೆ ಗಾಯ ಮಾಗಲು ಸುದೀರ್ಘ ಸಮಯ ಬೇಕಾಗುತ್ತಿತ್ತು ಹಾಗೂ ಇನ್ನಿತರೆ ಸಮಸ್ಯೆಗಳು ಎದುರಾಗುತ್ತಿದ್ದವು.

## ಆಧುನಿಕ ಬೆಳವಣಿಗೆಗಳು:

ಮಕ್ಕಳ ಬೆಳವಣಿಗೆಯನ್ನು ಒಂದು ಸಣ್ಣ ಪ್ರಕ್ರಿಯೆ (ರಿವರ್ಸಿಬಲ್ ಪ್ರೊಸಿಜರ್) ಮುಖಾಂತರ ಸರಿಪಡಿಸಬಹುದಾಗಿದ್ದು, ಇದರ ಮೂಲಕ ಸುಮಾರು 6-9 ತಿಂಗಳಲ್ಲಿ ನಿಧಾನವಾಗಿ ವಿಕಾರತೆಯನ್ನು ಸರಿಗೊಳಿಸಬಹುದು. ಇದರ ಒಂದು ಲಾಭವೇನೆಂದರೆ, ಚಿಕಿತ್ಸಾ ನಂತರ ಎದುರಾಗುವ ಸಮಸ್ಯೆಗಳು ಅತ್ಯಲ್ಪವಾಗಿರುತ್ತವೆ ಮತ್ತು ವೇಗವಾಗಿ ಗುಣವಾಗುತ್ತದೆ. ಈ ಚಿಕಿತ್ಸೆಯನ್ನು ಸುಮಾರು 11-13 ವರ್ಷದೊಳಗಿರುವ, ಇನ್ನೂ ಮೂಳೆ ಬೆಳವಣಿಗೆ ಹಂತದಲ್ಲಿರುವ ಮಕ್ಕಳಿಗೆ ನೀಡಬಹುದು. ಮಕ್ಕಳ ಕಾಲುಗಳ ಉದ್ದಳತೆಯಲ್ಲಿರುವ ವ್ಯತ್ಯಾಸ ನಿವಾರಿಸಲು ಕೂಡ ಈ ವಿಧಾನವನ್ನು ಬಳಸಿಕೊಳ್ಳಬಹುದಾಗಿದೆ.

SPARSH HOSPITAL
THE TOUCH OF LIFE

## ಇಂತಹ ಸಮಸ್ಯೆಯಿಂದ ಬಳಲುತ್ತಿರು ಮಕ್ಕಳು / ಪಾಲಕರಿಗೆ ಸಲಹೆ ಏನು?

ವಿಕಾರತೆಯ ಮೌಲ್ಯಮಾಪನ ಮಾಡಿಸಿ ಮತ್ತು ಚಿಕಿತ್ಸೆ ಅಗತ್ಯವಿದೆಯೆ ಎಂಬುದನ್ನು ಅರಿತುಕೊಳ್ಳಿ. ಸಾಕಷ್ಟು ಪ್ರಕರಣಗಳಲ್ಲಿ ಇದು ಸಹಜವೊ ಅಥವಾ ಫಿಜಿಯಾಲಾಜಿಕಲ್ ಆಗಿರುತ್ತದೆ. ಚಿಕಿತ್ಸೆಯ ಅಗತ್ಯವಿದ್ದಲ್ಲಿ, ಸೂಕ್ತ ಪ್ರಾಯದಲ್ಲಿಯೇ ಪಡೆದುಕೊಂಡು ಗಂಭೀರ ಶಸ್ತ್ರಚಿಕಿತ್ಸಾ ಕ್ರಮಗಳಿಂದ ದೂರ ಉಳಿಯಬಹುದು.

ಡಾ|| ಸರಸ್ವತಿ ವಿಶ್ವನಾಥನ್,
ಮಕ್ಕಳ ಮೂಳೆ ಶಸ್ತ್ರಚಿಕಿತ್ಸಾ ತಜ್ಞರು
ಸ್ಪರ್ಶ್ ಆಸ್ಪತ್ರೆ, ಬೆಂಗಳೂರು

ಹೆಚ್ಚಿನ ಮಾಹಿತಿಗಾಗಿ ಕರೆಮಾಡಿ
**080-61 222 000**
BANGALORE: Infantry Road I Yeshwanthpur I Hosur Road
Also at: Hassan I Davanagere I Raichur I Kalaburgi I Vijayapura
Visit: sparshhospital.com